ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 274/2024**

| ಸಾಕ್ಷಿಯ ಹೆಸರು | ಡಾ. ಶ್ರೀವಿದ್ಯ ವೈ | ಚಾಸಾಃ | ಪ್ರಾಸಾಃ |
|---|---|---|---|
| ಗಂಡನ ಹೆಸರು | ಶ್ರೀಧರ್ ಕೆ.ಜೆ | 10 | 6 |
| ವಯಸ್ಸು | 42 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **22.05.2026.** | |
| ಉದ್ಯೋಗ | Assistant Director, FSL | | |
| ವಾಸ ಸ್ಥಳ | ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಜುಲೈ 2018 ರಿಂದ ಇಲ್ಲಿಯವರೆಗೆ ವಿವಿಧ ಹುದ್ದೆಗಳಲ್ಲಿ ಬೆಂಗಳೂರಿನ FSL ನಲ್ಲಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 24.04.2024 ರಂದು ಕಗ್ಗಲಿಪುರ ಮೊಕದಮ್ಮೆ ಸಂಖ್ಯೆ 123/2024 ಕ್ಕೆ ಸಂಬಂಧಿಸಿದಂತೆ 1 ಸೀಲ್ ಮಾಡಿದ ಶರ್ಟ್ ಅನ್ನು ಪಿ.ಸಿ. ಸುಖದೇವ್ ರ ರವರು ನಮ್ಮ ಕಛೇರಿಯ ಸ್ವೀಕೃತಿ ವಿಭಾಗಕ್ಕೆ ಹಾಜರು ಪಡಿಸಿದ್ದು ಅದನ್ನು ವಿಭಾಗದ ಮುಖ್ಯಸ್ಥರು ನಮಗೆ ಕಳುಹಿಸಿಕೊಟ್ಟಿದ್ದರು. ಪರೀಶಿಲನೆ ಮಾಡಲಾಗಿ ಸದರಿ ವಸ್ತುವಿನ ಮೇಲೆ ಇದ್ದ ಮೋಹರು ಸುಸ್ಥಿತಿಯಲ್ಲಿ ಇದ್ದು ಕಳುಹಿಸಿದ್ದ ಮಾದರಿ ಮೋಹರಿಗೆ ಹೊಲಿಕೆ ಆಗುತ್ತಿತ್ತು. ದಿನಾಂಕ 30.04.2024 ರಂದು ನಾನು ಸದರಿ ಶರ್ಟ ಅನ್ನು ರಾಸಯನಿಕ ಪರೀಕ್ಷೆ ಒಳಪಡಿಸಿದಾಗ ಸದರಿ ಶರ್ಟ ನ ಮೇಲೆ ರಕ್ತದ ಕಲೆಗಳು ಕಂಡು ಬಂತು. ಅದು ಮಾನವ ರಕ್ತವಾಗಿದ್ದು ಬಿ" ಗ್ರೂಪ್ ರಕ್ತವಾಗಿತ್ತು. ಈ ಬಗ್ಗೆ ವರದಿ ನೀಡಿದ್ದು ಅದು ಡಿಜಿಟಲ್ ಸಹಿ ಇರುತ್ತದೆ. ಸದರಿ ವರದಿಯನ್ನು ನಿಶಾನೆ.ಪಿ. 6 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :

ನಮ್ಮ ಕಛೇರಿಯ ಸ್ವೀಕೃತಿ ವಿಭಾಗದಲ್ಲಿ ಸ್ವೀಕೃತಿಯನ್ನು ಕೊಟ್ಟಿರುತ್ತಾರೆ ಆದರೆ ನಾನು ನೋಡಿಲ್ಲ. ನನ್ನ ವರದಿಯಲ್ಲಿ ಯಾವ ಬಣ್ಣದ ಶರ್ಟ ಮತ್ತು ಯಾವ ರೀತಿಯ ಬಟ್ಟೆ ಎಂದು ನಮೂದು ಮಾಡಿಲ್ಲ.

ಕೇಸರಿ ಬಣ್ಣದ ತುಂಬು ತೋಳಿನ ಶರ್ಟ ಆಗಿತ್ತು. ನನ್ನ ವರದಿಯಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರ ಸರಿ ಅಲ್ಲ. ಆದರೆ ಈ ಬಗ್ಗೆ SOP ಸಹ ಇರುವುದಿಲ್ಲ. ಕೇಸರಿ ಬಣ್ಣದ ಶರ್ಟ ಅನ್ನು ಕಳುಹಿಸಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ವರದಿಯಲ್ಲಿ ಯಾವ ರೀತಿಯ ಪರೀಕ್ಷೆ ಮಾಡುತ್ತೇವೆ ಎಂದರೆ ಸರಿ ಅಲ್ಲ. ಇಂತಹ ವ್ಯಕ್ತಿಯ ರಕ್ತದ ಗುಂಪು ಎಂದು DNA ಪರೀಕ್ಷೆ ಮಾಡದೇ ಹೇಳಲು ಬರುವುದಿಲ್ಲ. ಶರ್ಟ ನಲ್ಲಿ ಇದ್ದ ರಕ್ತ ಚಿಮಕಿಸಿದ್ದು ಅಥವಾ ಯಾವ ರೀತಿ ಬಂದಿದ್ದು ಎಂಬ ಬಗ್ಗೆ ನಾನು ಏನು ಹೇಳಿರುವುದಿಲ್ಲ. ಎಷ್ಟು ವಯಸ್ಸಿನ ವ್ಯಕ್ತಿಯ ರಕ್ತ ಎಂದು ಹೆಚ್ಚಿನ ಸಂಶೋಧನೆ ಮಾಡಿ ಹೇಳಬೇಕಾಗುತ್ತದೆ. ಆ ರಕ್ತದ ಕಲೆ ಎಷ್ಟು ದಿನದ ಹಿಂದಿನದ್ದು ಎಂದು ಹೇಳಲು ಆಗುವುದಿಲ್ಲ. ಎಷ್ಟು ದಿನದ್ದು ಎಂದು ಗೊತ್ತಾಗುವುದಿಲ್ಲ. ನಾನು ಪೊಲೀಸರಿಗೆ ಅನುಕೂಲವಾಗುಂತೆ ವರದಿ ನೀಡಿದ್ದೇನನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.